ಅಸಲು ದಾವಾ ನಂ.93/2014
ಡಿ ಡಬ್ಲ್ಯೂ : 2

(ಇಂದು ದಿನಾಂಕಃ 17.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ

ನಿಡಿ-1 ವಂಶವೃಕ್ಷವನ್ನು ಊರಿನಲ್ಲಿ 6 ತಿಂಗಳ ಹಿಂದೆ ತಯಾರು ಮಾಡಲಾಗಿದೆ. ನಿಡಿ-1 ವಂಶವೃಕ್ಷದಲ್ಲಿ ನಮೂದಿಸಿರುವ ವ್ಯಕ್ತಿಗಳ ಆಧಾರ್ ಕಾರ್ಡ್ ಮತ್ತು ಮರಣ ಪ್ರಮಾಣ ಪತ್ರಗಳು ಇದ್ದು, ಅವುಗಳನ್ನು ಹಾಜರುಪಡಿಸಬಹುದು. ಸದರಿ ವಂಶವೃಕ್ಷವನ್ನು ವಕೀಲರು ಬರೆಸಿರುತ್ತಾರೆ. ಈ ದಾವೆಯನ್ನು ದಾಖಲಿಸಿದ ನಂತರ ಸದರಿ ವಂಶವೃಕ್ಷವನ್ನು ಬರೆಸಿರುತ್ತೇವೆ. ತಾಲ್ಲೂಕು ಕಚೇರಿಯಿಂದ ವಂಶವೃಕ್ಷ ಪಡೆದು ಹಾಜರುಪಡಿಸಿರುವುದಿಲ್ಲ. ನಿಡಿ-1 ವಂಶವೃಕ್ಷವನ್ನು ಮಾಡಿಕೊಡಬೇಕೆಂದು ವಕೀಲರಿಗೆ ಹೇಳಿದ್ದೆ. ನಾಗಯ್ಯ ಉಃ ಗಂಗಯ್ಯ ಎನ್ನುವ ವ್ಯಕ್ತಿ ಇರುವುದಿಲ್ಲ. ನಾಗಯ್ಯ ಉಃ ಗಣನಾಗಯ್ಯ ತೀರಿಹೋಗಿರುತ್ತಾರೆ. ನಾಗಯ್ಯ ಉಃ ಗಣನಾಗಯ್ಯ ಎಂದು ತೋರಿಸಲು ದಾಖಲೆ ಇರುವುದಿಲ್ಲ. ನಿಡಿ-2 ಮರಣ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತೆಗೆಸಿರುತ್ತಾರೆ. ಸದರಿ ದಾಖಲೆಯನ್ನು ದಾಖಲಿಸಿದ 6 ವರ್ಷಗಳ ನಂತರ 2019 ರಲ್ಲಿ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಯಾವ ರೀತಿ ಪಡೆದುಕೊಂಡಿರುವುದಾಗಿ ಗೊತ್ತಿಲ್ಲ.

ನಾಗಯ್ಯ ಯಾವ ದಿನಾಂಕ ಮರಣ ಹೊಂದಿರುತ್ತಾರೆಂದು ಗೊತ್ತಿಲ್ಲ. ನಾನು ನಮ್ಮ ವಕೀಲರಿಗೆ ನಾಗಯ್ಯ ಯಾವಾಗ ತೀರಿ ಹೋಗಿದ್ದರು ಎಂದು ಹೇಳಿರುವುದಿಲ್ಲ. ನಾಗಯ್ಯನ ಹೆಂಡತಿ ನಾಗಮ್ಮ ಇದ್ದು, ಅವರಿಗೆ 3 ಜನ ಮಕ್ಕಳು. ಅವರುಗಳೆಂದರೆ ಚಿಕ್ಕಮ್ಮ, ಹೊಸಮ್ಮ ಮತ್ತು ನಾಗಯ್ಯ ಇರುತ್ತಾರೆ. ಚನ್ನಮ್ಮನ ಗಂಡನ ಹೆಸರು ಕಾಡ. ಸದರಿ ಕಾಡನಿಗೆ ದೊಡ್ಡಯ್ಯ ಮತ್ತು ಹಿರಿಯ ವಗೈರೆ ಎನ್ನುವ ಇಬ್ಬರು ಮಕ್ಕಳಿರುತ್ತಾರೆ. ಕಾಡನ ತಂದೆಯ ಹೆಸರು ಗೊತ್ತಿಲ್ಲ. ದೊಡ್ಡಯ್ಯನಿಗೆ 5 ಜನ ಮಕ್ಕಳು. ಅವರುಗಳೆಂದರೆ ನಾಗಯ್ಯ, ಪೊಲೀರಯ್ಯ, ದೊಡ್ಡಮ್ಮ, ಈರಮ್ಮ ಮತ್ತು ಸಣ್ಣಮ್ಮ. ದೊಡ್ಡಯ್ಯನ ವಂಶದವರ ಹೆಸರುಗಳನ್ನು ಬರೆಸುವಂತೆ ವಕೀಲರಿಗೆ ಹೇಳಿರುತ್ತೇನೆ. ವಂಶವೃಕ್ಷದಲ್ಲಿ ಕಾಡಯ್ಯನ ವಂಶಸ್ಥರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.

ನಾಗಮ್ಮ 1968 ರಲ್ಲಿ ತೀರಿ ಹೋಗಿರುತ್ತಾರೆ. ಸದರಿರವರ ಮರಣ ದಿನಾಂಕವನ್ನು ಕಚೇರಿಯಲ್ಲಿ ದಾಖಲಿಸಿರುವುದಿಲ್ಲ. ನಾಗಮ್ಮ 1968 ರಲ್ಲಿ ತೀರಿ ಹೋದ ಬಗ್ಗೆ ದಾಖಲೆ ಇರುವುದಿಲ್ಲ. ವಕೀಲರ ಮೂಲಕ ನಾಗಮ್ಮರವರ ಮರಣ ದಿನಾಂಕವನ್ನು 2019 ರಲ್ಲಿ ದಾಖಲಿಸಿರುತ್ತೇನೆ. ನಾಗಮ್ಮನ ವಾರಸುದಾರರ ಮೂಲಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಮರಣ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ನಾಗಮ್ಮ 1968 ರಲ್ಲಿ ಮರಣ ಹೊಂದಿರುವ ಬಗ್ಗೆ ಚೀಟಿಯನ್ನು ತೋರಿಸಿ ಮರಣ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇವೆ.

ವಾದಿ ದಾವೆಯನ್ನು ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ದಾಖಲಿಸಿರುತ್ತಾರೆಂದು ಗೊತ್ತಿಲ್ಲ. ನಾಗಮ್ಮನ ಗಂಡನ ಹೆಸರು ನಾಗಯ್ಯ. ನಾಗಯ್ಯ ಮಲ್ಲಿಗನೂರಿನಲ್ಲಿ ಕುಳುವಾಡಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾವು ಕುಳುವಾಡಿಕೆ ಜಮೀನನ್ನು ಮಾಡುತ್ತಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ಜಮೀನು ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆ ಎಂದು ಗೊತ್ತಿಲ್ಲ. ನಮ್ಮ ವಂಶಸ್ಥರಿಗೆ ಜಮೀನು ಮಂಜೂರಾದ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ. ದಾವಾ ಆಸ್ತಿಯನ್ನು 1978-79 ರಲ್ಲಿ ಮಂಜೂರು ಮಾಡಲಾಗಿರುತ್ತದೆ. ನಮ್ಮ ತಂದೆ ಅಥವಾ ತಾಯಿ 1978-79 ರಲ್ಲಿ ಬದುಕಿರಲಿಲ್ಲ. ನಮ್ಮ ವಂಶಸ್ಥರು ಆಸ್ತಿಯನ್ನು ಮಂಜೂರು ಮಾಡಿ ಕೊಡುವಂತೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಆದರೆ ತಾಲ್ಲೂಕು ಕಚೇರಿಯವರು ಮಂಜೂರು ಮಾಡಿರುತ್ತಾರೆ. 1987-88 ರಲ್ಲಿ ಜಮೀನನ್ನು ಮಂಜೂರು ಮಾಡಿರುತ್ತಾರೆ. ಸದರಿ ಮಂಜೂರಾತಿ ಪತ್ರ ಮುಳ್ಳಯ್ಯನ ಹತ್ತಿರ ಇರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಬಹುದು.

ಮುಳ್ಳಯ್ಯ, ಮಟ್ಟಯ್ಯ, ಪೊಲೀರಯ್ಯ, ನಾಗಯ್ಯ ನವರಿಗೆ ಜಮೀನು ಕೊಟ್ಟಿರುತ್ತಾರೆ. 1987 ರಲ್ಲಿ ಜಮೀನು ಮಂಜೂರಾದಾಗ ನಾಗಯ್ಯ ಬದುಕಿರಲಿಲ್ಲ. ಆ ವೇಳೆಗೆ ನಾಗಯ್ಯ ಮರಣ ಹೊಂದಿ 18-20 ವರ್ಷ ಆಗಿರುತ್ತದೆ. ನಾಗಮ್ಮನ ಗಂಡ ನಾಗಯ್ಯ ಯಾವಾಗ ತೀರಿ ಹೋಗಿರುತ್ತಾರೆಂದು ಗೊತ್ತಿಲ್ಲ. ವಾದಿ ದೊಡ್ಡಯ್ಯ, ಹೊಟ್ಟಯ್ಯ ಮತ್ತು ಮುಳ್ಳಯ್ಯನವರೊಂದಿಗೆ ಆಸ್ತಿಯನ್ನು ಮಂಜೂರು ಮಾಡಿ ಕೊಡುವಂತೆ ಅರ್ಜಿ ಸಲ್ಲಿಸಿದ್ದರು. ಆ ಪ್ರಕಾರ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಮಂಜೂರಾತಿ ಪ್ರಕಾರ ಸರ್ವೆ ನಂಬರ್ 55, 56, 43, 38 ಮತ್ತು 36 ಆಸ್ತಿಗಳನ್ನು ಜಂಟಿಯಾಗಿ ಮಂಜೂರು ಮಾಡಲಾಗಿರುತ್ತದೆ. ಸದರಿ ಆಸ್ತಿಗಳನ್ನು ಮೇಲ್ಕಂಡವರೆಲ್ಲರೂ ಸಹ

ಜಂಟಿಯಾಗಿ ಅನುಭವಿಸುತ್ತಿದ್ದರು. ಸದರಿಯವರ ಹೆಸರುಗಳು ಜಂಟಿಯಾಗಿ ದಾಖಲೆಗಳಲ್ಲಿ ನಮೂದಾಗಿತ್ತು. ಮೇಲ್ಕಂಡ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿರುತ್ತವೆ. ಈ ಬಗ್ಗೆ ನಮ್ಮ ಬಳಿ ದಾಖಲೆಗಳು ಇದ್ದು ಅವುಗಳನ್ನು ಹಾಜರುಪಡಿಸಿರುವುದಿಲ್ಲ.

ನಿಡಿ–13 ರಲ್ಲಿ ಸರ್ವೆ ನಂಬರ್ 36 ಆಸ್ತಿ ಹಿರಿಯ ಮತ್ತು ವಗೈರೆ ಎಂದರೆ ಮತ್ತಿತರು ಎಂದು ಇರುತ್ತದೆ. ನಿಡಿ–13 ರಲ್ಲಿ ಸರ್ವೆ ನಂಬರ್ 36 ನಾಗಯ್ಯ, ದೊಡ್ಡಯ್ಯ, ಹೊಟ್ಟಯ್ಯ ಮತ್ತು ಮುಳ್ಳಮ್ಮ ಎಂದು ದಾಖಲಾಗಿರುತ್ತದೆ. ಸದರಿಯವರು ಹಿರಿಯನ ವಂಶಸ್ಥರು ಎಂದರೆ ಸರಿ. ನಾನು ಹಾಜರುಪಡಿಸಿರುವ ಎಲ್ಲಾ ಪಹಣಿಗಳು ಅದೇ ರೀತಿ ಇರುತ್ತವೆ. ಸಣ್ಣನಾಗಯ್ಯ ಬಿನ್ ಗಣನಾಗಯ್ಯ ಎಂದರೆ ನಾನೇ ಇರುತ್ತೇನೆ. 1987–88 ರಲ್ಲಿ 36 ಗುಂಟೆ ಆಸ್ತಿಯನ್ನು ನನ್ನ ಹೆಸರಿಗೆ ನನ್ನ ತಂದೆಯಿಂದ ಕುಳುವಾಡಿಕೆ ಮೂಲಕ ಬಂದಿರುತ್ತದೆ. ಅದಕ್ಕೂ ಮೊದಲು ಸದರಿ ಆಸ್ತಿ ಒಟ್ಟಿಗೆ ಇತ್ತು. ಸದರಿ ಮೇಲ್ಕಂಡ 4 ಜನ ನನಗೆ ಯಾವುದೇ ಪತ್ರ ಮಾಡಿಕೊಟ್ಟಿಲ್ಲ.

ಎಂ.ಆರ್ 4/1987–88 ನನ್ನ ಬಳಿ ಇರುತ್ತದೆ. ವಾದಿಗೆ 5 ಜನ ಮಕ್ಕಳು ಇದ್ದು ಅವರ ಹೆಸರು ಗೊತ್ತಿಲ್ಲ. ಮೇಲ್ಕಂಡ ದೊಡ್ಡಯ್ಯ, ಹೊಟ್ಟಯ್ಯ ಮತ್ತು ಮುಳ್ಳಯ್ಯ ರವರ ಪೈಕಿ ನಾಗಮ್ಮರವರನ್ನು ಹೊರತುಪಡಿಸಿ ಉಳಿದವರು ತೀರಿ ಹೋಗಿರುತ್ತಾರೆ. ಮಂಜೂರಾತಿ ಪ್ರಕಾರ ಅನುಕೂಲಕ್ಕೆ ತಕ್ಕಂತೆ ಅನುಭವಿಸಿಕೊಂಡು ಬರುತ್ತಿದ್ದಾರೆ.

ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು